'ಮಹೋದಯರೇ, ಈ ಎರಡು ವರ್ಷಗಳಲ್ಲಿ ನಾವು ನಡೆಸಿದ ಯುದ್ಧಗಳಿಂದಾಗಿ ಬೊಕ್ಕಸದ್ರವ್ಯವು ಬರಿದಾಗಿದೆ. ಮಂದಿರ ನಿರ್ಮಾಣಕ್ಕೆ ಬೇಕಾದ ಆಳುಕಾಳು, ದುಡಿಮೆಗಾರರು ಅದಕ್ಕೆ ತಗಲುವ ಧನಕನಕ ದುಡ್ಡುದುಗ್ಗಾಣಿಯನ್ನು ಸರಿತೂಗಿಸುವುದು ಎಲ್ಲಿಂದ' ಎಂದರು.

ಅಮಾತ್ಯರು ಮಹಾಪ್ರಭುಗಳ ಸಮಸ್ಯೆಗೆ ಸರಳ ಉತ್ತರವೆಂಬಂತೆ, 'ಸ್ವಾಮಿ, ದೇವಮಂದಿರ ನಿರ್ಮಾಣ ಅಂದಲ್ಲಿ ನಮ್ಮ ಜನಸಮೂಹವೇನು ಭಕ್ತಿಹೀನರೇ. ಈ ವಿದಿಶಾ ನಗರವೇ ಅಲ್ಲದೆ ದೇಶವ್ಯಾಪ್ತಿಯಲ್ಲಿ ಅದೆಷ್ಟು ಜನ ಶ್ರೀಮಂತರಿಲ್ಲ ಹೇಳಿ. ಇನ್ನು ಮಂದಿರ ನಿರ್ಮಾಣಕ್ಕೆ ದುಡಿಮೆಗಾರರು ಬೇಕಲ್ಲವೇ? ಅದಕ್ಕೂ ಸುಲಭೋಪಾಯವಿದೆ. ನಮ್ಮ ಸೆರೆಮನೆಯಲ್ಲೇ ಕಳ್ಳಕಾಕರು, ದರೋಡೆಕೋರರು ತುಂಬಿ ತುಳುಕುತ್ತಿರುವರಲ್ಲ! ಅವರೆಲ್ಲ ಗಾಂವಟಿಯ ಲೋಗರು. ಹೊಲಗದ್ದೆ, ಕೆರೆಕಟ್ಟೆಯ ಸಂಬಂಧ ಹೊಡೆದಾಡಿಕೊಂಡವರು, ಸ್ತ್ರೀ ಸಂಸರ್ಗ ವಿಚಾರದಲ್ಲಿ ಕೊಲೆಗೈದು ಬಂದವರು, ರಾತ್ರಿ ಕನ್ನ ಹಾಕಲು ಹೋಗಿ ಸಿಕ್ಕಬಿದ್ದ ಬಲುಗಳ್ಳರು, ಅರಮನೆ ಎದುರು ದನಿ ಎತ್ತರಿಸಿ ಮಾತಾಡಿದವರು, ಬೀದಿ ಕೂಡುವ ಚದುರಿನಲ್ಲಿ ನಿಂತು ಪಿಸುಮಾತಿನಲ್ಲಿ ಅಪಪ್ರಚಾರ ಮಾಡುತ್ತಿದ್ದ ಸಂಚುಗಾರರು ಇರುವರಲ್ಲ! ಆಶ್ಚರ್ಯವೆಂದರೆ ಇವರಲ್ಲಿ ಕರಕುಶಲಿಗಳೂ, ಶಿಲ್ಪಿಗಳೂ ಇದ್ದಾರೆ. ತಪ್ಪು ಯಾರು ಮಾಡುವುದಿಲ್ಲ ಹೇಳಿ. ನಾವು ಅವರನ್ನೆಲ್ಲ ಹಿಡಿತರಿಸಿ ಸೆರೆಮನೆಗೆ ತಳ್ಳಿಸಿದ್ದೇವಲ್ಲ. ಅವರ ಬರಿಗೈಗೆ ಇದೀಗ ನಿತ್ಯದುಡಿಮೆ ಹಚ್ಚಬಹುದು. ಅದೂ ದೇವಮಂದಿರ ಕಾಯಕ, ಪುಣ್ಯಸಂಚಯನ ಫಲ' ಎಂಬ ಸಲಹೆ ಇತ್ತರು.

ಮಹಾಪ್ರಭುಗಳು ತಮ್ಮ ಶಿರಸ್ಸನ್ನು ಅಲಂಕರಿಸಿದ್ದ ಕಿರೀಟವನ್ನು ಅದು ಅಲ್ಲಿಯೇ ಭದ್ರವಾಗಿರುವುದನ್ನು ತಮ್ಮೆರಡೂ ಹಸ್ತಗಳಿಂದ ಮುಟ್ಟಿ ಖಚಿತಪಡಿಸಿಕೊಳ್ಳುತ್ತ, 'ಓಹ್, ಇದೆಂಥ ಕರ್ಣಾನಂದಕರ ಮಾತು. ನನ್ನ ವಿಶಾಲ ವಕ್ಷದಲ್ಲೆಲ್ಲ ನಿಮ್ಮ ಮಾತುಗಳೇ ತುಂಬಿ, ಅಲ್ಲಿ ದೈವ ಮಂದಿರವೇ ನಿರ್ಮಾಣವಾಗಿ, ಅದರೊಳಗೆ ನಂದಾದೀವಿಗೆಯ ಬೆಳಕು ಕಾಣಿಸಿ ಅದು ನನ್ನನ್ನು ಆಶೀರ್ವದಿಸುತ್ತಿರುವಂತೆ ತೋರುತ್ತಿದೆಯಲ್ಲ' ಎಂದು ಆಹ್ಲಾದಮನರಾದರು.

ಹೀಗೆ ಜಿತಸೇನ ಮಹಾರಾಜರ, ಅಜಿತಸೇನರ ಈ ಸಂಭಾಷಣೆ ಬಹಳ ದಿನಗಳ ಹಿಂದೆಯೇ ನಡೆದದ್ದು!

★★★

ಇದೀಗ ಭವ್ಯ ದೇವಾಲಯ ನಿರ್ಮಾಣವಾಗಿ, ಅದರ ಹೊರ ಪ್ರಕಾರದ ಭಾರಿ ಎತ್ತರದ ಪೌಳಿಗೋಡೆ ಕಾರ್ಯ ನಡೆಯುವಲ್ಲಿ ಒಂದು ಬೆಳಗು ಜಿತಸೇನರೂ, ಅಜಿತಸೇನರೂ ಅದರ ಪರಿಶೀಲನಾರ್ಥ ನಗರದ ಹೊರವಲಯಕ್ಕೆ ಮಾರುವೇಷದಲ್ಲಿ ಬೆನ್ನಗವುಸು ಇಲ್ಲದ, ಬರಿಯ ಕಡಿವಾಣ ಮಾತ್ರದ ಬತ್ತಲುಗುದುರೆ ಏರಿ ಬಂದರು. ದೇವಾಲಯದ ಪ್ರಾಂಗಣ ಗೋಡೆಯ ಸುತ್ತುಬರುವಲ್ಲಿ ಮಹಾಪ್ರಭುಗಳ ದೃಷ್ಟಿ ಇದ್ದಕ್ಕಿದ್ದಂತೆ ಅಲ್ಲಿಯೇ ಮಂದಿರದ ತಳಪಾಯಕ್ಕೆ ಕಲ್ಲು ಜೋಡಿಸುತ್ತಿದ್ದ ಉಪ್ಪತಕನೆಂಬ ಬಲುಗಳ್ಳನೊಬ್ಬನ ಮೇಲೆ ಬಿದ್ದಿತು. ಹಾಗೆ ಅವರ ನೇತ್ರಗಳು ಇತ್ತ ತಿರುಗಲು ಕಾರಣ, ಅವನು ಎತ್ತರದ ಗಂಟಲಲ್ಲಿ ಹಾಡುತ್ತಿದ್ದ ಪದ–

ಗುಡಿಯ ಗೋಡೆ ಹೊರಳಿ ಬಿದ್ದು
ಧರ್ಮಶಾಸ್ತ್ರ ಅಲ್ಲೆ ಹೂತು
ಸಿಂಹಾಸನದ ಶಿರವು ಒಡೆದು
ಲೋಕವೆಲ್ಲ ದಿಕ್ಕು ತಪ್ಪಿ
ಆಹಾ ಕಾಲ ಪುರುಷನೇ
ಅಪರಾಧಗಳ ಮನ್ನಿಸೋ... ಎಂಬುದಾಗಿತ್ತು.